# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ 2014-15ನೇ ಸಾಲಿನ 3ನೇ ತ್ರೈಮಾಸಿಕ ಯೋಜನಾ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ: ಕೃಇ 5 ಕೃವಿರಾ 2014 ದಿನಾಂಕ: 14-05-2014 ಮತ್ತು 22-08-2014

2) ರಾಯಚೂರು ಕೃಷಿ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಕುಸ/ಕೃವಿವಿರಾ/2626/14-15 ರ ದಿನಾಂಕ 07.10.2014

**** *** ****

**ಪ್ರಸ್ತಾವನೆ:-**

2014-15ನೇ ಸಾಲಿನ ಆಯವ್ಯಯದಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ (ಯೋಜನೆ) ಕೃಷಿ ಶಿಕ್ಷಣ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ 2415-80-277-3-01-101 ಅಡಿಯಲ್ಲಿ ರೂ. 2400.00 ಲಕ್ಷಗಳ ಅನುದಾನವನ್ನು ಹಾಗೂ ಕೃಷಿ ಸಂಶೋಧನೆ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ 2415-80-004-3-01(ಸಹಾಯಧನ-101) ಅಡಿಯಲ್ಲಿ ರೂ. 1186.25 ಲಕ್ಷಗಳ ಸಹಾಯಾನುಧಾನವನ್ನು ಹಂಚಿಕೆ ಮಾಡಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ 1ರ ದಿನಾಂಕ 14-05-2014 ಮತ್ತು 22-08-2014ರ ಆದೇಶಗಳಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ (ಯೋಜನೆ) ಕೃಷಿ ಶಿಕ್ಷಣ ಉದ್ದೇಶಕ್ಕಾಗಿ 2415-80-277-3-01-101 ಅಡಿಯಲ್ಲಿ ಒದಗಿಸಲಾದ ರೂ. 2400.00 ಲಕ್ಷಗಳ ಪೈಕಿ (600.00+600.00) ರೂ. 1200.00 ಲಕ್ಷಗಳನ್ನು ಹಾಗೂ ಕೃಷಿ ಸಂಶೋಧನೆ ಉದ್ದೇಶಕ್ಕಾಗಿ 2415-80-004-3-01 (ಸಹಾಯಾನುದಾನ 101) ಅಡಿಯಲ್ಲಿ ಒದಗಿಸಲಾದ ರೂ. 1186.25 ಲಕ್ಷಗಳ ಅನುದಾನದ ಪೈಕಿ (296.57+296.57) ರೂ. 593.14 ಲಕ್ಷಗಳನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.

3. 2014-15ನೇ ಸಾಲಿನ ಅನುದಾನದ ಪೈಕಿ 1ನೇ ಮತ್ತು 2ನೇ ತ್ರೈಮಾಸಿಕ ಅನುದಾನವನ್ನು ನಿಗದಿಪಡಿಸಲಾದ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆಯೆಂದು ಬಳಕೆ ಪ್ರಮಾಣ ಪತ್ರವನ್ನು ಲಗತ್ತಿಸಿ ಮೇಲೆ (2)ರಲ್ಲಿ ಓದಲಾದ ದಿನಾಂಕ 07-10-2014ರ ಪತ್ರದೊಂದಿಗೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕುಲಸಚಿವರು ಸರ್ಕಾರಕ್ಕೆ ಕಳುಹಿಸುತ್ತಾ ಯೋಜನೆ ಅನುದಾನದ 3ನೇ ತ್ರೈಮಾಸಿಕ ಕಂತಿನ ಅನುದಾನವಾದ ರೂ. 600.00 ಲಕ್ಷಗಳನ್ನು ಕೃಷಿ ಶಿಕ್ಷಣ ಲೆಕ್ಕ ಶೀರ್ಷಿಕೆ 2415-80-277-3-01 ಸಹಾಯಾನುದಾನ 101ರಡಿ ಹಾಗೂ ರೂ. 296.57 ಲಕ್ಷಗಳನ್ನು ಕೃಷಿ ಸಂಶೋಧನೆ ಲೆಕ್ಕ ಶೀರ್ಷಿಕೆ 2415-80-004-3-01 ಸಹಾಯಾನುದಾನ 101ರಡಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

4. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಕೃಇ 5 ಕೃವಿರಾ 2014, ಬೆಂಗಳೂರು, ದಿನಾಂಕ: 01-12-2014

5. ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಯೋಜನೆ ಅಡಿಯಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ 2014-15ನೇ ಸಾಲಿಗೆ ಕೃಷಿ ಶಿಕ್ಷಣ ಲೆಕ್ಕಶೀರ್ಷಿಕೆ 2415-80-277-3-01-101 ರಡಿಯಲ್ಲಿ ಹಂಚಿಕೆ ಮಾಡಲಾದ ರೂ. 2400.00 ಲಕ್ಷಗಳ ಪೈಕಿ 600.00 ಲಕ್ಷಗಳನ್ನು (ರೂ. ಆರು ನೂರು ಲಕ್ಷಗಳು ಮಾತ್ರ) ಹಾಗೂ ಕೃಷಿ ಸಂಶೋಧನೆ ಲೆಕ್ಕಶೀರ್ಷಿಕೆ 2415-80-004-3-00-101ರಡಿಯಲ್ಲಿ ಹಂಚಿಕೆ ಮಾಡಲಾದ ರೂ. 1186.25 ಲಕ್ಷಗಳ ಪೈಕಿ 296.57 (ರೂ. ಇನ್ನೂರ ತೊಂಭತ್ತಾರು ಲಕ್ಷದ ಐವತ್ತೇಳು ಸಾವಿರ ಮಾತ್ರ) ಲಕ್ಷಗಳಂತೆ ಒಟ್ಟು ರೂ. 896.57 ಲಕ್ಷ (ಎಂಟು ನೂರ ತೊಂಭತ್ತಾರು ಲಕ್ಷ ಐವತ್ತೇಳು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಯೋಜನೆ ಉದ್ದೇಶಗಳಿಗಾಗಿ ಮೂರನೇ ತ್ರೈಮಾಸಿಕ ಯೋಜನೆ ಅನುದಾನವಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ:-

1. ಪ್ರತಿ ತಿಂಗಳ ಅನುದಾನವನ್ನು ಆಯಾ ತಿಂಗಳ 20ನೇ ತಾರೀಖಿನಂದು ಅಥವಾ 20ನೇ ತಾರೀಖಿನ ನಂತರ ಹಿಂದಿನ ತಿಂಗಳ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;
2. ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;
3. ಬಿಡುಗಡೆಯಾದ ಯೋಜನಾ ಅನುದಾನದ ಸಂಶೋಧನೆಯ ಪೈಕಿ ಶೇ. 50ರಷ್ಟು ಹಣವನ್ನು ಸಂಶೋಧನೆ ಮತ್ತು ಅಭಿವೃದ್ಧಿಯ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದು.
4. ಸರ್ಕಾರವು ನೀಡಿದ ಸೂಚನೆ, ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ಯೋಜನೆಯ ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;
5. ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;
6. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;

6. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು. ಇವರು ಸಲ್ಲಿಸುವ ಬಿಲ್ಲಿಗೆ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು ಇವರಿಗೆ ಮೇಲು ರುಜು ಮಾಡತಕ್ಕದ್ದು.

7. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 3 ಟಿಎಫ್‌ಪಿ 2014, ದಿನಾಂಕ: 04-04-2014ರಲ್ಲಿ ಆಡಳಿತಾತ್ಮಕ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಸೇವೆಗಳು ಮತ್ತು ಸಮನ್ವಯ)
(ದೂರವಾಣಿ ಸಂಖ್ಯೆ: 080 2203 2344)

ಹೊರಡಿಸಿದೆ
ದಿನಾಂಕ: 3/12/14

**ಇವರಿಗೆ:-**

1. ಮಹಾಲೇಖಪಾಲರು, (ಲೆಕ್ಕಪತ್ರ/ತನಿಖೆ) ಕರ್ನಾಟಕ, ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
3. ಕೃಷಿ ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
5. ಉಪ ನಿರ್ದೇಶಕರು, ನೆಟ್‌ವರ್ಕ್ ಮೇನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
6. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ರಾಯಚೂರು.
7. ಜಿಲ್ಲಾ ಖಜಾನಾಧಿಕಾರಿಗಳು, ರಾಯಚೂರು.
8. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ, ರೇಷ್ಮೇ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳು, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.